**ದಿನಾಂಕಃ 21.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ನೇ ಎದುರುದಾರರ ಪರ ವಕೀಲರಿಂದಃ-**

ಈ ಪ್ರಕರಣದಲ್ಲಿ ಇರುವ ಆಸ್ತಿಯ ಸರ್ವೇ ನಂಬರ್ 54/7, ವಿಸ್ತೀರ್ಣ 21 ಗುಂಟೆ ಇರುತ್ತದೆ. ವೆಂಕಟಸ್ವಾಮಿ ಅಂದರೆ 1 ನೇ ಕ್ಲೇಮೆಂಟ್‌ದಾರರು ತಕರಾರು ಮಾಡಿದ ಕಾರಣ ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಕಳುಹಿಸಲಾಗಿದೆ. ನಾನು ಅಸ್ತಿಯನ್ನು ಪಟೇಲ್ ಮಹೇಂದ್ರ ಎಂಬುವರಿಂದ 2000-01 ರಲ್ಲಿ ಖರೀದಿಸಿದ್ದೇನೆ. ನಾನು ಆಸ್ತಿ ಖರೀದಿಸಿದ ಬಗ್ಗೆ ಮೂಲ ಖರೀದಿ ಪತ್ರ ಹಾಜರುಪಡಿಸಿಲ್ಲ ಎನ್ನುವುದು ನಿಜ. ಸಾಕ್ಷಿ ಸ್ವತಃ ದೃಢೀಕೃತ ನಕಲು ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಎಂಬೆಸಿ ಗ್ರೂಫ್ ನವರ ವಿರುದ್ಧ ಅವರು ನಮ್ಮ ಆಸ್ತಿಯನ್ನು ಒತ್ತುವರಿ ಮಾಡಲು ಬಂದಿದ್ದಾರೆ ಎಂದು ಹೇಳಿ ಇನ್ನೊಂದು ದಾವೆ ಹಾಕಿದ್ದೇನೆ. ಸದರಿ ದಾವೆಯ ನಂಬರ್ ನಿಖರವಾಗಿ ನೆನಪಿಲ್ಲ. ಸದರಿ ದಾವೆ ಚಾಲ್ತಿಯಲ್ಲಿ ಇದೆ ಅನ್ನುವುದು ನಿಜ. ಮೂಲ ಖರೀದಿ ಪತ್ರವನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸ್ವಾಧೀನಪಡಿಸಿ ಆಸ್ತಿ ನನಗೆ ಸೇರಿತ್ತು ಎಂದು ತೋರಿಸುವ ಬಗ್ಗೆ ಖರೀದಿಪತ್ರ, ಬಿಡಿಎ ಬೆಟರ್ ಮೆಂಟ್ ಚಾರ್ಜ್ ರಶೀದಿ, ಟ್ಯಾಕ್ಸ್ ರಶೀದಿ ಹಾಗೂ ವಿದ್ಯುತ್ ಬಿಲ್, ಕಟ್ಟಡ ಪರವಾನಿಗೆ ಹಾಜರುಪಡಿಸಿದ್ದೇನೆ. ನಿಪಿ.6 ರಲ್ಲಿ ಅಂದರೆ 2006-07 ನೇ ಸಾಲಿನ ಆರ್ ಟಿ ಸಿಯಲ್ಲಿ ನನ್ನ ಹೆಸರಿನ ಜೊತೆ 1 ನೇ ಕ್ಲೇಮೆಂಟ್ ಹಾಗೂ ಇತರರ ಹೆಸರು ಇದೆ ಅನ್ನುವುದು ನಿಜ. ಸಾಕ್ಷಿ ಸ್ವತಃ ನನ್ನ ಹೆಸರಿನಲ್ಲಿ 21 ಗುಂಟೆ ಜಮೀನು ಇದೆ ಎಂದು ಹೇಳುತ್ತಾರೆ. ನಿಪಿ.6 ಆರ್ ಟಿ ಸಿ ಪ್ರಕಾರ ಅದರ ಒಟ್ಟು ವಿಸ್ತೀರ್ಣ 2 ಎಕರೆ 37 ಗುಂಟೆ ಅನ್ನುವುದು ನಿಜ. ಸದರಿ 2 ಎಕರೆ 37 ಗುಂಟೆಯಲ್ಲಿ ನನ್ನ ಹೆಸರಿನಲ್ಲಿ 21 ಗುಂಟೆ ಜಮೀನು ಇದೆ. 2 ಎಕರೆ 37 ಗುಂಟೆ ಜಮೀನು ರಸ್ತೆಗೆ ಹೋಗಿದೆ ಎಂದು ತೋರಿಸುವ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. 2 ಎಕರೆ 37 ಗುಂಟೆ ಜಮೀನಿನಲ್ಲಿ ರಸ್ತೆಗೆ ಹೋಗಿ ನನ್ನ ಜಮೀನು 21 ಗುಂಟೆ ಉಳಿದಿದೆ. ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದನ್ನು ಎಲ್ಲಿಯಾದರು ಪ್ರಶ್ನಿಸಿದ್ದೀರ ಎಂದರೆ ಸಾಕ್ಷಿಯು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿಲ್ಲ ಎಂದು ಹೇಳುತ್ತಾರೆ ಮತ್ತು ಮುಂದುವರೆದು ಆ ಬಗ್ಗೆ ಕೆಡಿಬಿ ಅವರು ಹಿಂಬರಹ ನೀಡಿದ್ದಾರೆ ಎಂದು ಹೇಳುತ್ತಾರೆ. ಆ ರೀತಿ ನೀಡಿದ್ದ

ಹಿಂಬರಹದಲ್ಲಿ ನನಗೆ ಸೇರಿದ 21 ಗುಂಟೆ ಜಮೀನು ಸ್ವಾ ಧೀನ ಪಡಿಸಿಕೊಂಡ ಜಮೀನಿನಲ್ಲಿ ಇಲ್ಲ ಎಂದು ಹೇಳಿದ್ದಾರೆ. ಆ ರೀತಿ ನೀಡಿದ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನನಗೆ ಸೇರಿದ ಯಾವುದೇ ಜಮೀನನ್ನು ನಾನು ಹೇಳಿದ ರೀತಿಯಲ್ಲಿ ಭೂಸ್ವಾದೀನಪಡಿಸಿಕೊಂಡಿಲ್ಲವಾದ ಕಾರಣ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸಾಕ್ಷಿಯು ಬಿ ಎಂ ಆರ್ ಸಿ ಎಲ್ ನವರು 1530 ಚದರ ಮೀಟರ್ ಅನ್ನು ಬಿ ಎಂ ಆರ್ ಸಿ ಎಲ್ ಗೆ ಭೂಸ್ವಾಧೀನ ಮಾಡಿದ್ದಾರೆ ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ನಾನು ಯಾವುದೇ ಮೂಲ ದಾಖಲಾತಿಗಳನ್ನು 1 ನೇ ಎದುರುದಾರರ ಮುಂದೆ ಹಾಜರುಪಡಿಸಿಲ್ಲ ಅನ್ನುವುದು ನಿಜ. ಅವಾರ್ಡ್ ನೋಟೀಸ್ ಕೊಟ್ಟನಂತರ ಕೂಡ ನಾನು 1 ನೇ ಎದುರುದಾರರ ಮುಂದೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಯಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ 1 ನೇ ಕ್ಲೇಮ್ ದಾರರಾದ ಬಿ ಎಂ ವೆಂಕಟಸ್ವಾ ಮಿಯವರ ಹೆಸರು ಕೂಡ ಇತ್ತು ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಪಹಣಿಪತ್ರಿಕೆಗಳಲ್ಲಿ 1 ನೇ ಕ್ಲೇಮ್ ದಾರರ ಹೆಸರು ನಮೂದಾಗಿರುವುದನ್ನು ನಾನು ಎಲ್ಲಿಯೂ ಪ್ರಶ್ನಿಸಿಲ್ಲ. 1 ನೇ ಎದುರುದಾರರು ಮಾಡಿ ಅವಾರ್ಡ್ ನಲ್ಲಿ ಕೂಡ 1 ನೇ ಕ್ಲೇಮ್ ದಾರರ ಹೆಸರು ಇರುವುದನ್ನು ಪ್ರಶ್ನಿಸಿ ನಾನು ಯಾವುದೇ ಅಪೀಲು ಮಾಡಿಲ್ಲ. ನಾನು ನನಗೆ ಸೇರಿದ 21 ಗುಂಟೆ ಜಮೀನಲ್ಲಿ ಮೆಟ್ರೋ ರೈಲು ಯೋಜನೆಗೆ ಭೂ ಸ್ವಾ ಧೀನಪಡಿಸಿಕೊಂಡಿದ್ದಾರೆ ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ ಎನ್ನುವುದು ನಿಜ.

**<u>ಮರು ವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಪದ್ಮ ಪ್ರಸಾದ್ )**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**